ಶ್ರೀ ವಿ. ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾವು ಈಗಾಗಲೇ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಅದಕ್ಕೆ ಬೇಕಾಗಿರುವ ಜಮೀನನ್ನು ಸ್ವಾಧೀನಪಡಿಸಿಕೊಂಡು ಅದಕ್ಕೆ ಬೇಕಾಗಿರುವ ಹಣವನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಸರ್ಕಾರದ ವತಿಯಿಂದ ಈಗಾಗಲೇ ಮಾಡುತ್ತಿದ್ದೇವೆ. ಬಹುಶಃ ಅದನ್ನು 1995ರಲ್ಲಿ ಪ್ರಾರಂಭ ಮಾಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎನ್. ತಮ್ಮಣ್ಣ : ಈ ಹೈಟಿನ್‌ಷನ್ ಲೈನ್‌ನಿಂದ ಎರಡು ಕಡೆಯಿಂದ ತರಬಹುದು. ಒಂದು ಕುಣಿಗಲ್ ಕಡೆಯಿಂದ ಮತ್ತೊಂದು ಕೆಆರ್‌ಎಸ್‌ನ ಕಡೆಯಿಂದ. ಕೆಆರ್‌ಎಸ್‌ನ ಕಡೆಯಿಂದ ಲೈನ್ ತಂದರೆ 35 ಕಿ.ಮೀ. ಆಗುತ್ತದೆ. ಕುಣಿಗಲ್‌ನ ಕಡೆಯಿಂದ ತಂದರೆ 45 ಕಿ.ಮೀ. ಆಗುತ್ತದೆ. ಆದ್ದರಿಂದ ಹತ್ತಿರವಿರುವ ಮಾರ್ಗದಿಂದ ತಂದರೆ ಬೇಗ ಆಗುತ್ತದೆ. ಆದ್ದರಿಂದ ಈ ಕೆಲಸವನ್ನು ಜನವರಿ 95 ಮೊದಲೇ ಏತಕ್ಕೆ ಮಾಡಲು ಆಗುವುದಿಲ್ಲ? ಅದಕ್ಕೆ ಏನಾದರೂ ಸಮಸ್ಯೆ ಇದ್ದರೆ ದಯಮಾಡಿ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಇದು ಸುಮಾರು 3107 ಲಕ್ಷದ ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗಬೇಕಾಗಿರತಕ್ಕ ಕಾರ್ಯಕ್ರಮ. ಅದಕ್ಕೆ ಸ್ಟ್ರಕ್ಚರ್ ಎಲ್ಲಿಂದ ಬರಬೇಕು ಎಂಬ ಬಗ್ಗೆ ಸರ್ವೆ ಮಾಡಬೇಕಾಗಿದೆ. ಪಾಂಡವಪುರದ ಕಡೆಯಿಂದ 40 ಕಿ.ಮೀ. ಉದ್ದದಲ್ಲಿ 250 ಕೆ.ವಿ.ಯ ಪ್ರಸರಣ ಮಾರ್ಗವನ್ನು ನಿರ್ಮಾಣ ಮಾಡಬೇಕಾಗಿದೆ. ಆದ್ದರಿಂದ ಅದನ್ನು ಸಂಪೂರ್ಣವಾಗಿ ಸರ್ವೆ ಮಾಡಿದಮೇಲೆ ಆ ಕೆಲಸವನ್ನು ಪ್ರಾರಂಭ ವ್ಯವಸ್ಥೆ ಮಾಡಬೇಕಾಗುತ್ತದೆ.

ತೀರ್ಥಹಳ್ಳಿ ತಾಲ್ಲೂಕಿನ ಕುಂದಗ್ರಾಮದ ಮಾಲತಿ ನದಿಗೆ ಸೇತುವೆ ನಿರ್ಮಾಣ

207- ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೀರ್ಥಹಳ್ಳಿ ತಾಲ್ಲೂಕಿನ ಕುಂದಗ್ರಾಮದ ಮಾಲತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಬೇಕೆಂಬ ಬೇಡಿಕೆ ಬಹಳ ದಿನಗಳಿಂದ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಹಿಂದೆ ಈ ಸೇತುವೆ ನಿರ್ಮಾಣದ ಬಗ್ಗೆ ಸ್ವಲ್ಪ ಕಾಮಗಾರಿ ಆಗಿ ಹಾಗೆಯೇ ನಿಂತಿದ್ದು ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಸೇತುವೆ ನಿರ್ಮಿಸಬೇಕೆಂಬ ಬೇಡಿಕೆ ಗಮನಕ್ಕೆ ಬಂದಿದೆ?

ಆ) ಈ ಸೇತುವೆ ಕಾಮಗಾರಿಯನ್ನು 1962ರಲ್ಲಿ ಕಾರ್ಯಾರಂಭ ಮಾಡಲಾಗಿತ್ತು. ಅಡಿಪಾಯದ ವಿನ್ಯಾಸದ ಬದಲಾವಣೆಯಿಂದ ನಿರ್ಮಾಣ ಕಾರ್ಯದ ಮೊತ್ತ ಹೆಚ್ಚಳವಾಗಿದೆ. ಮಾಲತಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸುವುದರಿಂದ ಈ ಸೇತುವೆ ಮುಳುಗಡೆ ಆಗುವ ಸಂದರ್ಭದ ಹಿನ್ನೆಲೆಯಲ್ಲಿ ಸೇತುವೆ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ.

ಪ್ರಶ್ನೆಯ ಸಂಖ್ಯೆ : 207

ಉತ್ತರವನ್ನು ಲಗತ್ತಿಸಲಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ :ಸನ್ಮಾನ್ಯ ಅಧ್ಯಕ್ಷರೆ, ಪಿಡಬ್ಲ್ಯೂಡಿ ಇಲಾಖೆಯು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎನ್ನುವ ಬಗ್ಗೆ ಒಂದು ನಿದರ್ಶನ ಇಲ್ಲಿ ಇದೆ. 1962ನೇ ಇಸವಿಯಲ್ಲಿ ಮಂಜೂರಾದ ಸೇತುವೆಯು ಅನಂತರ ಅದರ ವಿನ್ಯಾಸದಲ್ಲಿ ಬದಲಾವಣೆಯಾಯಿತು ಎಂದು ಮುಂದೂಡಲಾಗಿದೆ. ಸೇತುವೆಯನ್ನು

ಮಾಡುವ ಮೊದಲು ತಾಂತ್ರಿಕವಾಗಿ ಮಂಜೂರಾತಿಯು ದೊರೆಯುತ್ತದೆ, ಅನಂತರ ಆಡಳಿತಾತ್ಮಕವಾದ ಮಂಜೂರಾತಿ ದೊರಕುತ್ತದೆ. ಈ ರೀತಿ ಎರಡೂ ಮಂಜೂರಾತಿಯು ದೊರಕಿದ ಮೇಲೆ ವಿನ್ಯಾಸದಲ್ಲಿ ಬದಲಾವಮೆಯಾಗಲು ಕಾರಣವೇನೋ ನನಗೆ ಗೊತ್ತಿಲ್ಲ. ಕಾರಣವಿದ್ದರೆ ದಯಮಾಡಿ ಮಂತ್ರಿಗಳು ತಿಳಿಸಬೇಕು. ಎರಡನೆಯದಾಗಿ ಕಾರಣವನ್ನು ಚೆನ್ನಾಗಿ ಕೊಟ್ಟಿದ್ದಾರೆ. ಅದೇನೆಂದರೆ ಮಾಲತಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸುವುದರಿಂದ ಈ ಸೇತುವೆ ಮುಳುಗಡೆ ಆಗುವ ಸಂದರ್ಭದ ಹಿನ್ನೆಲೆಯಲ್ಲಿ ಸೇತುವೆ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆಯೆಂದು ಹೇಳಿದ್ದಾರೆ. ಈ ಸೇತುವೆಯೇನಾದರೂ ಆಗಿದ್ದರೆ 32 ವರ್ಷಗಳು ಕಳೆದುಹೋಗಿರಬೇಕಾಗಿತ್ತು. ಈ ಸಮಯದಲ್ಲಿ ಆ ಸೇತುವೆಯ ಯುಟಿಲಿಟಿ ಮುಗಿದುಹೋಗಿರಬೇಕಾಗಿತ್ತು. ನೀವು ಮುಂದೆ ಪ್ರಾಜೆಕ್ಟ್‌ನ್ನು ಮಾಡುತ್ತೇವೆಂದು, ಜನರಿಗೆ ತುರ್ತಾಗಿ, ಅಗತ್ಯವೆಂದು ಕಂಡು ಬಂದು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿರತಕ್ಕದ್ದನ್ನು ಈ ರೀತಿ ನಿಲ್ಲಿಸತಕ್ಕದ್ದು ಸರಿಯೇ?

ಶ್ರೀ ಕೆ.ಹೆಚ್. ರಂಗನಾಥ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಸರಿಯೆಂದು ಹೇಳಲು ತಯಾರಿಲ್ಲ. ಆದರೆ ವಿಷಯಕ್ಕೆ ಅದರದ್ದೇ ಆದಂಥ ಚರಿತ್ರೆ ಇರುತ್ತದೆ. ಹಾಗೆಯೇ ಈ ಸೇತುವೆಗೂ ಅದರದ್ದೇ ಆದಂಥ ಚರಿತ್ರೆ ನಡೆದು ಬಂದಿದೆ. ಇದರ ಅಂದಾಜು ವೆಚ್ಚ 1960ನೇ 2.42 ಲಕ್ಷವಾಗಿತ್ತು. 1968ರಲ್ಲಿ ಇದರ ಕೆಲಸಕ್ಕೆ ಗುತ್ತಿಗೆಯನ್ನು ಕೊಟ್ಟಿದ್ದಾರೆ. ಮತ್ತು ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಮಾಡಿದ್ದಾರೆ. ಆದರೆ ತಳಪಾಯದಲ್ಲಿ ಏನೋ ತೊಂದರೆ ಇದೆ. ಸರಿಯಾಗಿಲ್ಲವೆಂದು ವಿನ್ಯಾಸದಲ್ಲಿ ಬದಲಾವಣೆ ಮಾಡಬೇಕೆಂದು ಸರ್ಕಾರಕ್ಕೆ ವಾಪಸ್ ಬಂದಿದೆ. ಅದರ ಪರಿಷ್ಕೃತ ಅಂದಾಜು ವೆಚ್ಚ 7.78 ಲಕ್ಷಕ್ಕೆ ಅನಂತರ ಅನುಮೋದನೆಯನ್ನು ಕೊಟ್ಟಿದ್ದಾರೆ.

ಈ ಮಧ್ಯ 68ರಲ್ಲಿ ಇದನ್ನು ನಿಲ್ಲಿಸಿಬಿಡಿ ಎಂದು ಹೇಳಿದ್ದಾರೆ. ಮುಂದೆ ನಾವು ಕುಂದಗ್ರಾಮದ ಬಳಿ ಒಂದು ಅಣೆಕಟ್ಟು ಕಟ್ಟುತ್ತೇವೆಂದಾಗ ಈ ನದಿಗೆ ಸೇತುವೆ ಕಟ್ಟುವುದರಿಂದ ಅದು ಮುಳುಗಡೆಯಾಗುತ್ತದೆ. ಆದ್ದರಿಂದ ಇದು ಬೇಡವೆಂದು ಅದು ಹಾಗೆಯೇ ಉಳಿದುಕೊಂಡಿದೆ. ಅಪ್ಪರ್ ತುಂಗಾ ಬೇರೆ ಬರುವುದರಿಂದ ಇದೂ ಕೂಡ ಮುಳುಗಡೆಯಾಗುತ್ತದೆ ಎಂದು ಹೇಳಿ ಆ ವಿಚಾರವನ್ನು ಯೋಚನೆ ಮಾಡಿ ಬೇಡವೆಂದು ತೀರ್ಮಾನ ತೆಗೆದುಕೊಳ್ಳುವುದು ಸೂಕ್ತವೆನಿಸುತ್ತದೆ. ಏಕೆಂದರೆ ತುಂಗಅಣೆಕಟ್ಟು ಅಲ್ಲಿ ಬರುವುದಾದರೆ ಇದು ಮುಳುಗಡೆಯಾಗುವುದಾದರೆ ಈ ಸೇತುವೆ ಕಟ್ಟಿ ಏನೂ ಪ್ರಯೋಜನವಾಗುವುದಿಲ್ಲ. ಇವತ್ತಿನ ಪರಿಷ್ಕೃತ ಅಂದಾಜಿನ ಪ್ರಕಾರ 45 ಲಕ್ಷ ರೂಪಾಯಿಗಳು ಆಗುತ್ತದೆ. ಮಾನ್ಯ ಸದಸ್ಯರು ಹೇಳಿದಹಾಗೆ ಇದು ಒಂದು ದೊಡ್ಡ ಚರಿತ್ರೆಯೇ ಆಗಿದೆ. ಈ ಸೇತುವೆ ಬಗ್ಗೆ ಇರುವಂಥ ವಸ್ತು ಸ್ಥಿತಿಯನ್ನು ಸದನದ ಮುಂದೆ ಇಟ್ಟಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇವರು ಇದನ್ನು ಮಾಡುವ ಆಲೋಚನೆ ಇಲ್ಲವೆನ್ನುವಂತಹ ಅಭಿಪ್ರಾಯಕ್ಕೆ ಬಂದಹಾಗೆ ಆಯಿತು. ಇದು ಜನರು ಮಾಡಿದ ಅಪರಾಧವಲ್ಲ, ಅಲ್ಲಿನ ಇಂಜಿನಿಯರ್‌ಗಳು ನಿಮ್ಮ ಇಲಾಖೆಯಿಂದ ಮಾಡಿದ ಅಪರಾಧ. ಅಪ್ಪರ್ ತುಂಗಾ ಪ್ರಾಜೆಕ್ಟ್‌ಗೂ ಮಾಲತಿ ನದಿಗೂ ಕಟ್ಟುವಂತಹ ಸೇತುವೆಗೂ 30-35 ಕಿ.ಮೀ. ಇದೆ. ಇದಕ್ಕೂ ಅದಕ್ಕೂ ಅರ್ಥಾತ್ ಸಂಬಂಧವಿಲ್ಲ. ಮಾಲತಿ ಅಣೆಕಟ್ಟಿನ ಮೇಲೆ ಕಟ್ಟಿದರೆ ಮಾತ್ರ ಈ ಸೇತುವೆಗೆ ಅಪಾಯ ಆಗುತ್ತದೆ. ಇದನ್ನು ಕೈಬಿಟ್ಟು ಅಪ್ಪರ್ ತುಂಗಾ ಪ್ರಾಜೆಕ್ಟ್ ಮಾಡಬೇಕೆಂದು ಹೇಳಿ 333 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಮಾಡಿ ಹಿಂದಿನ ಮುಖ್ಯಮಂತ್ರಿಗಳು ಅಲ್ಲಿ ಫೌಂಡೇಷನ್ ಮಾಡಿದ್ದಾರೆ. ಇದರಿಂದ 13.8ಅಡಿ ಏರಿಸಬೇಕೆಂದು ಹೇಳಿ, ಅದನ್ನು ಏರಿಸುವುದಕ್ಕೆ,ಇದಕ್ಕೂ ಏನೂ ಸಂಬಂಧವಿಲ್ಲ. ಆದುದರಿಂದ ಇದನ್ನು ಪುನರ್ ಪರಿಶೀಲನೆ ಮಾಡಿ ಇದಕ್ಕೆ

ಮಂಜೂರಾತಿಯನ್ನು ಕೊಡಬೇಕು. ಒಂದು ವೇಳೆ ಅದು ಅಪ್ಪರ್ ತುಂಗಾದಲ್ಲಿ ಆಗುತ್ತದೆ ಎನ್ನತಕ್ಕಂಥ ಕಲ್ಪನೆ ಇದ್ದರೆ, ಇದನ್ನು ಕೈ ಬಿಡಿ, ಸಂಪೂರ್ಣವಾದ ಜವಾಬ್ದಾರಿ ವಹಿಸಿಕೊಳ್ಳಿ, ಇಲಾಖೆಯಿಂದ ಆದಂತಹ ತಪ್ಪನ್ನು ಕುಂದಾಪುರದ ಜನರಿಗೆ ಹಾಕುವುದು ಒಳ್ಳೆಯದಲ್ಲ, ಆದುದರಿಂದ ಅಲ್ಲಿ ಸೇತುವೆಯನ್ನು ಕಟ್ಟುವುದಕ್ಕೆ ಆಜ್ಞೆ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಯೋಚನೆ ಮಾಡಿದ್ದೆ ಹಾಗೂ ಇಲ್ಲವೆಂದು ಹೇಳಬೇಕೆಂದು ಮನಸ್ಸು ಮಾಡಿದ್ದೆ. ಮಾನ್ಯ ಸದಸ್ಯರು ಅಪ್ಪರ್ ತುಂಗಾಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ. ಇದು ದೂರದಲ್ಲಿದೆ. ಮುಳುಗಡೆಯಾಗುವುದಿಲ್ಲವೆನ್ನುವ ಮಾತನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ನಾನು ಇರಿಗೇಷನ್ ಇಲಾಖೆಯವರೊಂದಿಗೆ ಸಂಪರ್ಕಿಸಿ ಮಾಲತಿ ಅಣೆಕಟ್ಟು ಆಗುತ್ತದೆಯೇ ಅದು ಅಪ್ಪರ್ ತುಂಗಾದಲ್ಲಿ ಮುಳುಗಡೆಯಾಗುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡಿಸಿ ಆ ರೀತಿಯಾಗುವುದಿಲ್ಲವೆಂದು ಹೇಳಿದರೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿದ್ಯುತ್ ಯೋಜನೆಗೆ ವಿಶ್ವಬ್ಯಾಂಕ್ ನೆರವು

286 - ಶ್ರೀ ಗುರುಪಾದಪ್ಪ ನಾಗಾರ್ಪಲ್ಲಿ (ಜೀರಾದ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿದ್ಯುತ್ ಯೋಜನೆಗಳಿಗೆ ವಿಶ್ವಬ್ಯಾಂಕಿನಿಂದ ಕೇಳಲಾಗಿದ್ದ ನೆರವಿನ ಮೊತ್ತವೆಷ್ಟು?

ಆ) ಈ ಯೋಜನೆಗಳಿಗೆ ನೆರವನ್ನು ನೀಡಲು ವಿಶ್ವಬ್ಯಾಂಕ್ ನಿರಾಕರಿಸಿರುವುದು ನಿಜವೆ, ಕಾರಣವೇನು?

ಇ) ಇತ್ತೀಚೆಗೆ ರಾಜ್ಯದ ಮುಖ್ಯಮಂತ್ರಿಗಳು ತಮ್ಮ ವಿದೇಶ ಪ್ರವಾಸದ ಸಮಯದಲ್ಲಿ ವಿಶ್ವಬ್ಯಾಂಕಿನ ಅಧಿಕಾರಿಗಳ ಜೊತೆ ಈ ವಿಷಯವಾಗಿ ಚರ್ಚೆ ನಡೆಸಿದ್ದಾರೆಯೇ?

ಈ) ವಿಶ್ವ ಬ್ಯಾಂಕ್ ಸಾಲದ ನೆರವನ್ನು ನಿರಾಕರಿಸಿರುವುದರಿಂದ ರಾಜ್ಯದ ವಿದ್ಯುತ್ ಯೋಜನೆಗಳನ್ನು ಪೂರ್ಣಗೊಳಿಸಲು ಯಾವ ರೀತಿ ಹಣ ಸಂಗ್ರಹಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಕರ್ನಾಟಕ ವಿದ್ಯುತ್ ನಿಗಮದ ಯೋಜನೆಗಳಿಗೆ 425.36ಕೋಟಿ ರೂಪಾಯಿಗಳ ಸಾಲದ ನೆರವನ್ನು ಒದಗಿಸಲಾಗಿತ್ತು.

ಆ) ಹೌದು. ನಿರಾಕರಣೆಯ ಕಾರಣಗಳು ಕೆಳಕಂಡಂತಿವೆ.

1) ಶರಾವತಿ ಟೇಲ್ ರೇಸ್ ಸ್ಕೀಮಿಗೆ ಕೇಂದ್ರ (ಭಾರತ ಸರ್ಕಾರ) ಪರಿಸರ ಹಾಗೂ ಅರಣ್ಯ ಇಲಾಖೆಯ ಅನುಮತಿ ದೊರೆಯದಿರುವುದು.

2) ಕರ್ನಾಟಕ ವಿದ್ಯುತ್ ಯೋಜನೆಗಳು-1 ರಡಿಯ ಕದ್ರಾ ಮತ್ತು ಕೊಡಸಳ್ಳಿ ಯೋಜನೆಯ ಪುನರ್ವಸತಿಗಾಗಿ ಬೇಕಾಗಿರುವ ಅರಣ್ಯ ಭೂಮಿಗೆ ಅನುಮೋದನೆ ದೊರೆಯದೆ ಇದ್ದುದರಿಂದ.

3) ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ ಬಂಡವಾಳ ಹೂಡುವಿಕೆಯ ಮೇಲಿನ ಶೇ. 3 ರಷ್ಟು ಮತ್ತು ಮೇಲ್ಚಟ್ಟು ಲಾಭ ಪಡೆಯದಿರುವುದು, ಮತ್ತು

4) ತಲಕೆಳಲಿ ಅಣೆಕಟ್ಟಿನ ದುರಸ್ತಿ ಕೆಲಸದ ಸಲುವಾಗಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ವಿಶ್ವ ಬ್ಯಾಂಕಿಗೆ ತೃಪ್ತಿ ಆಗುವ ರೀತಿಯಲ್ಲಿ ಒಪ್ಪಂದವನ್ನು ಮಾಡಿಕೊಳ್ಳದೆ ಇರುವುದು.

ಇ) ಹೌದು.